# ಕಲ್ಲಬ್ಬೆಯಲ್ಲಿ ಬೋನ್ಸಾಯ್ ಬೆಡಗು



**ಉತ್ತರಕನ್ನಡ ಜಿಲ್ಲೆಯ ಪುಟ್ಟ ಹಳ್ಳಿ ಕಲ್ಲಬ್ಬೆಯಲ್ಲಿ ಬೋನ್ಸಾಯ್‌ನ ದೊಡ್ಡ ಉದ್ಯಾನ ರೂಪುಗೊಂಡಿದೆ. ನಿವೃತ್ತ ಅರಣ್ಯಾಧಿಕಾರಿ ಎಲ್‌.ಆರ್‌. ಹೆಗಡೆ ಅವರ ಪರಿಶ್ರಮ ಕುಬ್ಜ ವೃಕ್ಷಗಳ ರೂಪದಲ್ಲಿ ಅನಾವರಣಗೊಂಡಿದೆ.**

■ **ಗಣಪತಿ ಹಾಸ್ಪುರ**

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಮೂರೂರು ಸಮೀಪ ಇರುವ ಪುಟ್ಟ ಹಳ್ಳಿ ಕಲ್ಲಬ್ಬೆ. ತಾಲ್ಲೂಕು ಕೇಂದ್ರದಿಂದ ಸುಮಾರು 10 ಕಿ.ಮೀ. ದೂರದಲ್ಲಿರುವ ಕಲ್ಲಬ್ಬೆ ಬಹಳ ಸುಂದರವಾದ ಊರು. ಒಂದೆಡೆ, ಕೃಷಿಕರು ಬೆವರು ಸುರಿಸಿ ಬೆಳೆಸಿದ ಅಡಿಕೆ–ತೆಂಗಿನ ಮರಗಳ ಸೊಬಗು. ಮತ್ತೊಂದು ಕಡೆಗೆ ನೈಸರ್ಗಿಕವಾಗಿ ಬೆಳೆದು ನಿಂತಿರುವ ಹಸಿರು ಸಿರಿ. ಇಂತಹ ವಿಶಿಷ್ಟ ಸೌಂದರ್ಯದ ಊರಿನ ಚೆಲುವಿಗೆ ವಿಶ್ರಾಂತ ಅರಣ್ಯಾಧಿಕಾರಿ ಅವರ ‘ಕುಬ್ಜ ವೃಕ್ಷ ರಾಶಿ’ಯೂ ತನ್ನ ಕೊಡುಗೆ ನೀಡಿದೆ.

ಊರಿನವರಿಂದ ಲಕ್ಕಣ್ಣ ಎಂದು ಪ್ರೀತಿಯಿಂದ ಕರೆಸಿಕೊಳ್ಳುವ ಎಲ್.ಆರ್. ಹೆಗಡೆ, ಮೂರು ದಶಕಕ್ಕೂ ಹೆಚ್ಚು ಕಾಲ ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರು. ನಿವೃತ್ತರು ಮಕ್ಕಳು–ಮೊಮ್ಮಕ್ಕಳೊಂದಿಗೆ ನಗರದಲ್ಲಿ ನೆಲೆಸಿ ಕಾಲ ಕಳೆಯಲು ಹಂಬಲಿಸುವುದು ಸಹಜ. ಆದರೆ, ಹೆಗಡೆಯವರ ದಾರಿಯೇ ಬೇರೆ. ಅವರು ತಮ್ಮ ವಿಶ್ರಾಂತ ಜೀವನವನ್ನು ಹುಟ್ಟೂರಿನಲ್ಲಿಯೇ ಕಳೆಯುತ್ತಿದ್ದಾರೆ; ವೃತ್ತಿಯ ಅನುಭವವನ್ನು ಪ್ರವೃತ್ತಿಗೆ ವಿಸ್ತರಿಸಿಕೊಂಡಿದ್ದಾರೆ.



ಗಿಡಮರಗಳೊಂದಿಗೆ ಹೆಗಡೆ ಅವರಿಗೆ ಅವಿನಾಭಾವ ನಂಟು. ತಮ್ಮ ವೃತ್ತಿ ಜೀವನದಲ್ಲಿ ನೂರಾರು ಬಗೆಯ, ವಿಭಿನ್ನ ಪ್ರಭೇದದ ಗಿಡಗಳನ್ನು ಬೆಳೆಸಿದ ಅನುಭವ ಅವರದು. ಈಗ ನಿವೃತ್ತಿಯ ನಂತರ ಬೋನ್ಸಾಯ್ ಗಿಡಗಳನ್ನು ರೂಪಿಸುವಲ್ಲಿ ತೊಡಗಿಕೊಂಡಿದ್ದಾರೆ.

ಹೆಗಡೆಯವರು ಬೋನ್ಸಾಯ್ ಗಿಡಗಳನ್ನು ತಮ್ಮ ಮನೆಯ ಪುಟ್ಟ ಜಾಗದಲ್ಲಿಯೇ ಬೆಳೆಸಿದ್ದಾರೆ. ಎಲ್ಲ ಗಿಡಗಳನ್ನು ಪ್ಲಾಸ್ಟಿಕ್, ಸಿಮೆಂಟಿನ ಕುಂಡಗಳಲ್ಲಿ ಬೆಳೆಸಿದ್ದಾರೆ. ಗಿಡಗಳನ್ನು ಬೆಳೆಸಲಿಕ್ಕೆ ಬೇಕಾದ ಸಿಮೆಂಟಿನ ತೊಟ್ಟಿಗಳನ್ನು ತಾವೇ ರೂಪಿಸಿಕೊಂಡಿದ್ದಾರೆ. ಇದರಿಂದ ತಮಗೆ ಬೇಕಾದ ಆಕಾರದ ಕುಂಡಗಳನ್ನು ತಯಾರಿಸಿಕೊಳ್ಳುವುದು ಸಾಧ್ಯವಾಗಿರುವುದಲ್ಲದೆ, ವೆಚ್ಚದಲ್ಲೂ ಉಳಿತಾಯವಾಗಿದೆ.

‘ಶಂಭುಮನೆ’ಯ ಪುಟ್ಟ ಆವರಣದಲ್ಲಿ ಮೂರು ವರ್ಷಗಳ ಹಿಂದೆ ಆರಂಭವಾದ ಬೋನ್ಸಾಯ್ ಕೃಷಿ ಈಗ ನೋಡುವವರ ಕಣ್ತುಂಬುವಂತೆ ಬೆಳೆದಿದೆ. ‘ಕುಬ್ಜ ವೃಕ್ಷ ಕಲಾನಿಕೇತನ’ ಎಂಬ ಹೆಸರಿನಲ್ಲಿ ನೋಂದಾವಣೆಗೊಳ್ಳುವ ಮೂಲಕ ಬೋನ್ಸಾಯ್ ಕೃಷಿಗೆ ಶಿಸ್ತುಬದ್ಧ ಚೌಕಟ್ಟು ದೊರೆತಿದೆ.

ಆಲ, ಅಶ್ವತ್ಥ, ಮುತ್ತುಗ, ಖೈರ, ಶಮೆ, ರಕ್ತಚಂದನ, ಹಲಸು, ಮಾವು, ಬೋರೆ, ದಾಸವಾಳ, ಸೇರಿದಂತೆ 27 ಪ್ರಭೇದದ 200ಕ್ಕೂ ಹೆಚ್ಚು ಗಿಡಗಳು ವೃಕ್ಷ ಕಲಾನಿಕೇತನದಲ್ಲಿವೆ. ಬೋನ್ಸಾಯ್ ವೃಕ್ಷರಾಶಿಯ ಮಧ್ಯೆಯೇ ‘ನವಗ್ರಹ ವನ’ ಇದೆ. ಅಲ್ಲದೇ ಪ್ರತಿಯೊಂದು ರಾಶಿಗೆ ಅನುಗುಣವಾಗಿ ಕುಬ್ಜ ವೃಕ್ಷಗಳನ್ನು ಬೆಳೆಸಿರುವುದು ವಿಶೇಷ. ವನಸ್ಪತಿ ಗಿಡಗಳೂ ಹೇರಳವಾಗಿವೆ.

ಕಲ್ಲಬ್ಬೆಯ ನಿವೃತ್ತ ಆರ್.ಎಫ್.ಓ. ಹೆಗಡೆ ಅವರು ಈ ಕುಬ್ಜ ವೃಕ್ಷಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಬೆಳೆಸಿದವರಲ್ಲ. ಬೋನ್ಸಾಯ್ ಪದ್ಧತಿಯ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ತಮ್ಮ ಮನೆಯ ಆವಾರದಲ್ಲಿ ಹತ್ತಾರು ಬಗೆಯ ಕುಬ್ಜ ಗಿಡಗಳನ್ನು ಬೆಳೆಸಿದ್ದಾರೆ. ಈ ವೃಕ್ಷ ರಾಶಿಯನ್ನು ವೀಕ್ಷಿಸಲು ಬಂದವರಿಗೆ ತಮಗೆ ತಿಳಿದ ಸರಳ ವಿಧಾನ, ಅದರ ಮಹತ್ವ, ಕಸಿ ಕಟ್ಟುವ ಪದ್ಧತಿಯನ್ನು ಮುಕ್ತವಾಗಿ ವಿವರಿಸುತ್ತಾರೆ.

‘ಕಾಳಿ ಹುಲಿ ಸಂರಕ್ಷಿತ ಅಭಯಾರಣ್ಯ’ದಲ್ಲಿರುವ ಸರೀಸೃಪಗಳು ಹಾಗೂ ವನ್ಯ ಪ್ರಾಣಿಗಳ ಕಲಾಕೃತಿಗಳು ಹೆಗಡೆಯವರ ಬೋನ್ಸಾಯ್ ಉದ್ಯಾನದ ಚೆಲುವು ಹೆಚ್ಚಿಸಿವೆ. ಹುಲಿ ಸಂರಕ್ಷಿತ ಪ್ರದೇಶದಲ್ಲಿರುವ ಸಸ್ಯ ಸಂಕುಲಗಳನ್ನು ಬೋನ್ಸಾಯ್ ವಿಧಾನದಲ್ಲಿ ಬೆಳೆಸಲಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಅಳಿವಿನ ಅಂಚಿನಲ್ಲಿರುವ ಸಸ್ಯ ಪ್ರಭೇದಗಳಿಗೂ ಸ್ಥಾನ ದೊರಕಿದೆ.

ಹೆಗಡೆ ಅವರ ಸಂಪರ್ಕ ಸಂಖ್ಯೆ: 9480746716

ಪ್ರತಿಕ್ರಿಯಿಸಿ: feedback@sudha.co.in